# ಸಿಹ್ರ್ ಮತ್ತು ದೃಷ್ಟಿ

## [ السحر والعين ]

**[Kannada – ಕನ್ನಡ – كنادي ]**

**ಫತಾವ ಲ್ಲಜ್ನತಿ ದ್ದಾಇಮಃ**

**فتاوى اللجنة الدائمة**


**ಅನುವಾದ: ಮುಹಮ್ಮದ್ ಹಂಝಾ ಪುತ್ತೂರು**

**ترجمة: محمد حمزة بتوري**



IslamHouse.com

**1436 – 2015**

بِسْمِ اللهِ الرَّحْمَـنِ الرَّحِيم

ಪ್ರಶ್ನೆ ಸಂಖ್ಯೆ 6366:

ಪ್ರಶ್ನೆ: ಸಿಹ್ರ್ ಮತ್ತು ದೃಷ್ಟಿಯ ಮಧ್ಯೆಯಿರುವ ವ್ಯತ್ಯಾಸವೇನು? ದೃಷ್ಟಿಗೆ ಧರ್ಮದಲ್ಲಿ ಯಾವುದಾದರೂ ವಿಧಿಯಿದೆಯೇ? ದೃಷ್ಟಿ ತಾಗಿಸಿದವನಿಗೆ ಮತ್ತು ತಾಗಿದವನಿಗಿರುವ ಚಿಕಿತ್ಸೆಯೇನು?

ಉತ್ತರ: ಭಾಷಿಕವಾಗಿ ಸಿಹ್ರ್ ಎಂಬುದು ಕಾರಣವು ಅವ್ಯಕ್ತವಾಗಿರುವುದಕ್ಕಿರುವ ಅಥವಾ ಸೂಕ್ಷ್ಮವಾಗಿರುವುದಕ್ಕಿರುವ ಅಭಿವ್ಯಕ್ತಿಯಾಗಿದೆ. ಪಾರಿಭಾಷಿಕ ಅರ್ಥದಲ್ಲಿ ಸಿಹ್ರ್ ಎಂದರೆ ಅಭಿಚಾರ ಮತ್ತು ಮಂತ್ರೋಚ್ಚಾರಣೆಯಾಗಿದೆ. ಸಿಹ್ರ್‌ನ ಪೈಕಿ ಹೃದಯಗಳ ಮೇಲೆ ಮತ್ತು ದೇಹಗಳ ಮೇಲೆ ಪ್ರಭಾವ ಬೀರಿ ಕಾಯಿಲೆ ಬೀಳಿಸುವ, ಕೊಲೆಗೈಯ್ಯುವ, ಗಂಡ ಹೆಂಡತಿಯರ ಮಧ್ಯೆ ಒಡಕು ಮೂಡಿಸುವ ಮೊದಲಾದ ವಿಧಗಳಿವೆ. ಅಲ್ಲಾಹು ಹೇಳುತ್ತಾನೆ:

﴿ فَيَتَعَلَّمُونَ مِنْهُمَا مَا يُفَرِّقُونَ بِهِ بَيْنَ الْمَرْءِ وَزَوْجِهِ وَمَا هُمْ بِضَارِّينَ بِهِ مِنْ أَحَدٍ إِلَّا بِإِذْنِ اللَّهِ ﴾

“ಅವರು ಅವರಿಬ್ಬರಿಂದ (ಹಾರೂತ್ ಮತ್ತು ಮಾರೂತ್‌ರಿಂದ) ಪತಿಪತ್ನಿಯರ ಮಧ್ಯೆ ಒಡಕು ಮೂಡಿಸುವ ವಿದ್ಯೆಯನ್ನು ಕಲಿಯುತ್ತಿದ್ದಾರೆ. ಆದರೆ ಅಲ್ಲಾಹನ ಅಪ್ಪಣೆಯ ಹೊರತು ಯಾರಿಗೂ ಕೆಡುಕನ್ನುಂಟು ಮಾಡಲು ಅವರಿಂದ ಸಾಧ್ಯವಿಲ್ಲ.” [ಕುರ್‌ಆನ್ 2/102]

ದೃಷ್ಟಿ (ಐನ್) ಎಂಬುದು ‘ಆನ ಯುಈನು’ (ದೃಷ್ಟಿ ತಾಗಿಸಿದನು) ಎಂಬ ಪದದಿಂದ ಬಂದುದಾಗಿದೆ. ದೃಷ್ಟಿಯು ಸತ್ಯವಾಗಿದೆ. ಸಹೀಹಾದ ಹದೀಸಿನಲ್ಲಿ ವರದಿಯಾಗಿರುವ ಪ್ರಕಾರ ಪ್ರವಾದಿ(ﷺ)ರವರು ಹೇಳಿದರು:

الْعَيْنُ حَقٌّ وَلَوْ كَانَ شَيْءٌ سَابِقُ الْقَدَرِ سَبَقَتْهُ الْعَيْنُ وَإِذَا اسْتُغْسِلْتُمْ فَاغْسِلُوا

“ದೃಷ್ಟಿಯು ಸತ್ಯವಾಗಿದೆ. ವಿಧಿ (ಕದರ್)ಯನ್ನು ದಾಟಿ ಏನಾದರೂ ಮುಂದೆ ಹೋಗುವುದಿದ್ದರೆ ದೃಷ್ಟಿಯು ಮುಂದೆ ಹೋಗುತ್ತಿತ್ತು. ನಿಮ್ಮೊಂದಿಗೆ ತೊಳೆಯುವಂತೆ ಹೇಳಲಾದರೆ ನೀವು ತೊಳೆಯಿರಿ.” [ಸಹೀಹ್ ಮುಸ್ಲಿಮ್ 2188, ಸುನನು ತ್ತಿರ್ಮಿದಿ 2062, ಮುಸ್ನದ್ ಅಹ್ಮದ್ 1/294]

ದೃಷ್ಟಿಯು ಸಿಹ್ರ್‌ನಂತೆಯೇ ನಿಷಿದ್ಧವಾಗಿದೆ. ಹದೀಸಿನಲ್ಲಿರುವಂತೆ ದೃಷ್ಟಿ ತಾಗಿಸುವವನಿ ಗಿರುವ ಚಿಕಿತ್ಸೆಯು ಅವನು ಅದ್ಭುತವಾದ ಏನನ್ನಾದರೂ ಕಂಡರೆ ಅಲ್ಲಾಹನನ್ನು ಸ್ಮರಿಸಿ ಬರಕತ್‌ಗಾಗಿ ಪ್ರಾರ್ಥಿಸುವುದಾಗಿದೆ. ಪ್ರವಾದಿ(ﷺ)ರವರು ಹೇಳಿದರು:

هَلَّا إِذَا رَأَيْتَ مَا يُعْجِبُكَ بَرَّكْتَ؟

“ಅದ್ಭುತವಾದುದನ್ನು ಕಾಣುವಾಗ ನೀನು ಬರಕತ್‌ಗಾಗಿ ಪ್ರಾರ್ಥಿಸಬಾರದಿತ್ತೇ?” [ಸುನನ್ ಇಬ್ನ್ ಮಾಜ 3509, ಮುಸ್ನದ್ ಅಹ್ಮದ್ 3/487, ಮುವತ್ತ ಮಾಲಿಕ್ 1747]

ಆದ್ದರಿಂದ ಅವನು ‘ಮಾಶಾ ಅಲ್ಲಾಹು ಲಾ ಕುವ್ವತ ಇಲ್ಲಾ ಬಿಲ್ಲಾಹ್’ ಎನ್ನಬೇಕು ಮತ್ತು ಆ ವ್ಯಕ್ತಿಗೋಸ್ಕರ ಬರಕತ್‌ಗಾಗಿ ಪ್ರಾರ್ಥಿಸಬೇಕು. ದೃಷ್ಟಿ ತಾಗಿದವನ ಬಗ್ಗೆ ಹೇಳುವುದಾದರೆ ಅವನು ತನ್ನ ದೇಹವನ್ನು ಅಲ್ಲಾಹನಲ್ಲಿರುವ ವಿಶ್ವಾಸ ಮತ್ತು ಭರವಸೆಯ ಮೂಲಕ ಮತ್ತು ಕುರ್‌ಆನ್ ಹಾಗೂ ಸುನ್ನತ್ತಿನಲ್ಲಿ ಬಂದಂತಹ ಪ್ರಾರ್ಥನೆಗಳನ್ನು ಪ್ರಾರ್ಥಿಸುವ ಮೂಲಕ ರಕ್ಷಿಸಬೇಕು. ದೃಷ್ಟಿ ತಾಗಿಸಿದವನು ಯಾರು ಎಂಬುದು ತಿಳಿದು ಬಂದರೆ ಆತನು ಒಂದು ಪಾತ್ರೆ ನೀರಿನಲ್ಲಿ ತನ್ನ ಮುಖ, ಕೈಗಳು ಮತ್ತು ಅಂಗಿಯ ಒಳಭಾಗವನ್ನು ತೊಳೆದು ಕೊಡುವುದಕ್ಕಾಗಿ ಬೇಡಿಕೆಯಿಡಲು ಶರೀಅತ್ ನಿರ್ದೇಶಿಸಿದೆ. ತರುವಾಯ ದೃಷ್ಟಿ ತಾಗಿದವನು ಆ ನೀರಿನಿಂದ ಸ್ನಾನ ಮಾಡಬೇಕಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದ್ದಾರೆ:

وَإِذَا اسْتُغْسِلْتُمْ فَاغْسِلُوا

**“ನಿಮ್ಮೊಂದಿಗೆ ತೊಳೆಯುವಂತೆ ಹೇಳಲಾದರೆ ನೀವು ತೊಳೆಯಿರಿ.” [ಸಹೀಹ್ ಮುಸ್ಲಿಮ್ 2188, ಸುನನು ತ್ತಿರ್ಮಿದಿ 2062, ಮುಸ್ನದ್ ಅಹ್ಮದ್ 1/294]**

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أجْمَعِين .

*********